# ಕಾಮಿಡಿ ಮತ್ತು ಸೀರಿಯಸ್

ನವಜೋತ್ ಸಿಂಗ್ ಸಿಧು ಮಂತ್ರಿಯಾಗಿದ್ದಾರೆ. ಕ್ರಿಕೆಟ್ ಮೈದಾನದಲ್ಲಿ ಒಂದು ಕಾಲದಲ್ಲಿ 'ಸಿಕ್ಸರ್ ಸಿಧು' ಎಂದೇ ಹೆಸರು ಪಡೆದ, ಕಾಮೆಂಟರಿ ಬಾಕ್ಸ್‌ನಲ್ಲಿ ಕುಳಿತರೆ ಚಟಪಟನೆ ಮಾತನಾಡುವ, ಟೀವಿ ಯ 'ಕಾಮಿಡಿ ಷೋ'ನಲ್ಲಿ ಪುಂಖಾನುಪುಂಖ ಶಾಯರಿಗಳನ್ನು ಒಗೆದು ಪ್ರೇಕ್ಷಕರನ್ನು ನಕ್ಕು ನಗಿಸುವ ಸಿಧು, ಈಗ ಪಂಜಾಬ್ ರಾಜಕೀಯದಲ್ಲಿ ಸೂಪರ್‌ಸ್ಟಾರ್. ಪಂಜಾಬ್ ಸರಕಾರದ ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಸ್ಥಳೀಯ ಸಂಸ್ಥೆಗಳ ಖಾತೆಯ ಸಚಿವರಾಗಿರುವ ನವಜೋತ್‌ಸಿಂಗ್ ಸಿಧು ಅವರದ್ದು ಸಚಿವ ಸಂಪುಟದಲ್ಲಿ ಮೂರನೆಯ ರ್‍ಯಾಂಕ್! ಅವರ ಬೆಂಬಲಿಗರ ಪ್ರಕಾರ, ಅವರು ಮುಖ್ಯಮಂತ್ರಿಯೇ ಆಗಬೇಕಿತ್ತು. ಆದರೆ ಚುನಾವಣೆಯ ಹೊತ್ತಿಗೆ ಕಾಂಗ್ರೆಸ್ ಸೇರಿದ್ದರಿಂದ ಮುಖ್ಯಮಂತ್ರಿ ಆಗುವ ಅವಕಾಶ ಸಿಗಲಿಲ್ಲವಂತೆ.

ಎಲ್ಲ ಸರಿ, ಇದುವರೆಗೆ ತಮಾಷೆಯಾಗಿ, ಕಾಮಿಡಿಯಲ್ಲೇ ಮುಳುಗಿಹೋಗಿದ್ದ ಸಿಧು ಅವರು ಇನ್ನುಮುಂದೆ ಹಾಗೆಯೇ ಇರಲು ಸಾಧ್ಯವೆ? ರಾಜಕೀಯ ಎನ್ನುವುದು ಗಂಭೀರ ವೃತ್ತಿ ಅಲ್ಲವೆ? ಅದಕ್ಕೆ ತಕ್ಕಂತೆ ಸಿಧು ಹೆಚ್ಚು ಸೀರಿಯಸ್ ಆಗಿ ನಡೆದುಕೊಳ್ಳಬೇಕಲ್ಲವೆ?– ಹೀಗೆಲ್ಲ ಪ್ರಶ್ನೆಗಳು ಎದ್ದಿವೆ. ಅದಕ್ಕೆ ಕಾರಣ ಅವರದ್ದೊಂದು ಹೇಳಿಕೆ: 'ಸಚಿವನಾದರೂ ಟೀವಿ ಯಲ್ಲಿ ಕಪಿಲ್ ಶರ್ಮಾ ಷೋ ನಲ್ಲಿ ನಾನು ಭಾಗವಹಿಸುವುದನ್ನು ನಿಲ್ಲಿಸುವುದಿಲ್ಲ. ಅದು ನನ್ನ ಹೊಟ್ಟೆ ತುಂಬಿಸುವ ಏಕೈಕ ವೃತ್ತಿ!'

ಸಚಿವರಾದವರು ಹೀಗೆ ಇನ್ನೊಂದು ಲಾಭದಾಯಕ ವೃತ್ತಿಯಲ್ಲಿ ತೊಡಗಿಕೊಳ್ಳಬಹುದೆ? ಇಲ್ಲಿ ಹಿತಾಸಕ್ತಿಗಳ ಸಂಘರ್ಷದ ಪ್ರಶ್ನೆ ಬರುವುದಿಲ್ಲವೆ? ರಾಜಕೀಯದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು ಸಚಿವರಾದವರ ಕೆಲಸ ಅಲ್ಲವೆ?– ಇವು ಈಗ ರಾಜಕೀಯ ವಿರೋಧಿಗಳು ಕೇಳುತ್ತಿರುವ ಪ್ರಶ್ನೆಗಳು. ಪತ್ರಕರ್ತರು ಈ ಪ್ರಶ್ನೆಗಳನ್ನು ಕೇಳಿದಾಗ, ಸಿಧು ತಮ್ಮ ಎಂದಿನ ಶೈಲಿಯಲ್ಲಿ 'ಒಟ್ಟು ಆರು ಸಲ ಜನರು ಚುನಾವಣೆಯಲ್ಲಿ ನನಗೆ ಮತಹಾಕಿ ಗೆಲ್ಲಿಸಿದ್ದಾರೆ. ಅವರಿಗೆ ಇಲ್ಲದ ಸಮಸ್ಯೆ ನಿಮಗೇಕೆ?' ಎಂದು ಮರುಪ್ರಶ್ನೆ ಹಾಕಿದ್ದಾರೆ. ಮಾತು ಕೂಡಾ ಒಂದು ಕಲೆ. ಆದರೆ ಅಧಿಕಾರದ ಗದ್ದುಗೆ ಏರಿದ ಬಳಿಕ ಮಾತು ಮೃತ್ಯುವಾಗುವುದೇ ಹೆಚ್ಚು. ಸಿಧು ಅವರು ಈಗ ಹಿಂದಿನಂತೆ ಮುಕ್ತವಾಗಿ ಜೋಕ್ ಹೊಡೆದುಕೊಂಡು ಆರಾಮವಾಗಿ ಇರುವುದು ಅಷ್ಟು ಸುಲಭವಿಲ್ಲ. ಕಾಮಿಡಿ ಷೋ ನಲ್ಲಿ ಜಡ್ಜ್ ಕೆಲಸವನ್ನು ಮುಂದುವರಿಸುವ ಅವರ ನಿರ್ಧಾರ ತಿರುಗುಬಾಣವಾಗುವ ಸಾಧ್ಯತೆಯೇ ಹೆಚ್ಚು. ಈಗಲ್ಲವಾದಲ್ಲಿ ಮುಂದೆ ಯಾವುದಾದರೂ ಷೋ ಒಂದರಲ್ಲಿ ಸಿಧು ಅವರು ಜಾಣತನದ ಶಾಯರಿಗಳನ್ನು ಉರುಳಿಸಲು ಹೋಗಿ ತಾವೇ ಉರುಳಿಗೆ ಸಿಕ್ಕಿಬೀಳುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.



ಸದ್ಯಕ್ಕಂತೂ ಸಿಧು ಅವರದ್ದು ಜಾಣ ನಡೆಯೇ. 1999ರವರೆಗೆ 19 ವರ್ಷಗಳ ಕಾಲ ಸುದೀರ್ಘ ಕ್ರಿಕೆಟ್ ಜೀವನ ನಡೆಸಿದ ಸಿಧು ಅವರು, 51 ಟೆಸ್ಟ್ ಪಂದ್ಯಗಳು ಮತ್ತು 131 ಏಕದಿನ ಪಂದ್ಯಗಳಲ್ಲಿ ಭಾರತದ ಪರ ಆಟವಾಡಿ ಮಿಂಚಿದವರು. 1987ರ ವಿಶ್ವಕಪ್‌ನಲ್ಲಿ ಸತತ ನಾಲ್ಕು ಪಂದ್ಯಗಳಲ್ಲಿ ಅರ್ಧಶತಕ ಬಾರಿಸಿದ್ದು ನೆನಪಿಟ್ಟುಕೊಳ್ಳಬೇಕಾದ ಸಾಧನೆಯೇ. ಒಂದು ದಿನ ಪಂದ್ಯಗಳಲ್ಲಿ ಐದು ಶತಕಗಳನ್ನು ಹೊಡೆದ ಮೊದಲಿಗ ಸಿಧು. ಒಟ್ಟು ರನ್‌ಗಳ ದಾಖಲೆಗಿಂತ ಹೆಚ್ಚಾಗಿ ಪಂದ್ಯಗಳಲ್ಲಿ ಸಿಕ್ಸರ್‌ಗಳನ್ನು ಎತ್ತಿ ತಿರುವು ಕೊಡುವ ಸಿಧು ಹುಮ್ಮಸ್ಸೇ ಹೆಚ್ಚು ಸುದ್ದಿ ಮಾಡಿದ್ದು. ಅಜರುದ್ದೀನ್ ನಾಯಕರಾಗಿದ್ದಾಗ, ತನ್ನನ್ನು ಬೇಕೆಂದೇ ನಿರ್ಲಕ್ಷ್ಯ ಮಾಡುತ್ತಿದ್ದಾರೆಂದು ಸಿಟ್ಟಿಗೆದ್ದ ಸಿಧು, ವಿದೇಶ ಪ್ರವಾಸದಿಂದ ವಾಪಸ್ ಬಂದದ್ದೂ ಒಮ್ಮೆ ಸುದ್ದಿಯಾಗಿತ್ತು.

ಮೂಗಿನ ತುದಿಯ ಸಿಟ್ಟು ಜೀವನದಲ್ಲಿ ಸಖತ್ತಾಗಿ ಕೈಕೊಟ್ಟದ್ದು 1988ರಲ್ಲಿ. ತನ್ನ ಜಿಪ್ಸಿ ಯನ್ನು ದಾರಿಯಲ್ಲಿ ನಿಲ್ಲಿಸಿದ್ದ ಸಿಧುವನ್ನು ಹಿಂದಿನಿಂದ ಬಂದ ಮಾರುತಿ ಕಾರಿನ ಒಡೆಯ ಬೈದು ಪಕ್ಕಕ್ಕೆ ಸರಿಯಲು ಹೇಳಿದ. ಮಾತಿಗೆ ಮಾತು ಬೆಳೆದು ಸಿಟ್ಟಿಗೆದ್ದ ಸಿಧು ಮತ್ತು ಅವರ ಗೆಳೆಯ ಸಂಧು ಎರಡೇಟು ಬಿಗಿದರು. ಏಟು ತಿಂದ ವ್ಯಕ್ತಿ ಗಾಯಗೊಂಡು ನೆಲಕ್ಕೊರಗಿದ. ಆತನ ಕಾರಿನ ಕೀ ತೆಗೆದುಕೊಂಡು ಸಿಧು ಮತ್ತು ಸಂಧು ಅಲ್ಲಿಂದ ಹೊರಟುಹೋದರು. ಸ್ವಲ್ಪ ಸಮಯದ ಬಳಿಕ ಗಾಯಗೊಂಡವನನ್ನು ಇನ್ಯಾರೋ ಆಸ್ಪತ್ರೆಗೆ ಸೇರಿಸಿದರು. ಆಸ್ಪತ್ರೆಯಲ್ಲಿ ಆ ವ್ಯಕ್ತಿ ಮೃತನಾದ. ಸಿಧು ವಿರುದ್ಧ ಕೊಲೆ ಆರೋಪ ದಾಖಲಾಯಿತು. ಕೆಳನ್ಯಾಯಾಲಯದಲ್ಲಿ ಖುಲಾಸೆಯಾದರೂ ಹೈಕೋರ್ಟ್‌ನಲ್ಲಿ ತೀರ್ಪು ವಿರುದ್ಧ ಬಂದು ಮೂರು ವರ್ಷದ ಶಿಕ್ಷೆ ಪ್ರಕಟವಾಗಿ ಜೈಲು ಸೇರಿದರು. ಸುಪ್ರೀಂಕೋರ್ಟ್‌ಗೆ ಮನವಿ ಸಲ್ಲಿಸಿದ ಸಿಧು ಜಾಮೀನಿನಲ್ಲಿ ಹೊರಬಂದರು. ಇನ್ನೂ ಕೇಸು ಮುಗಿದಿಲ್ಲ.

ವೈಯಕ್ತಿಕವಾಗಿ ಸಿಧು ಸ್ನೇಹಪ್ರಿಯ. ಗುಂಡಿಲ್ಲ, ಸಿಗರೇಟಿಲ್ಲ, ಮಾಂಸಾಹಾರ ಮುಟ್ಟುವುದಿಲ್ಲ. ಮಾತಿಗೆ ನಿಂತರೆ ಎಂಥವರೂ ತಲೆದೂಗಬೇಕು, ಅಷ್ಟೊಂದು ರಸಮಯ. ಅಮೃತಸರ ಪೂರ್ವ ಕ್ಷೇತ್ರದಲ್ಲಿ 42000 ಮತಗಳ ಭಾರೀ ಅಂತರದಿಂದ ಗೆದ್ದದ್ದೇ ಅಲ್ಲದೆ, ಅಮೃತಸರ ಜಿಲ್ಲೆಯಲ್ಲಿ ಒಟ್ಟು 11 ಕ್ಷೇತ್ರಗಳಲ್ಲಿ 10 ಕ್ಷೇತ್ರಗಳನ್ನು ಕಾಂಗ್ರೆಸ್ ಬಾಚಿಕೊಳ್ಳುವಲ್ಲೂ ಸಿಧು ಚರಿಷ್ಮಾ ನೆರವಾಗಿದೆ. ಬಹುಶಃ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ಭಾರೀ ಜನಪ್ರಿಯತೆ ಇಲ್ಲವಾಗಿದ್ದಲ್ಲಿ ಸಿಧು ಮುಖ್ಯಮಂತ್ರಿಯೇ ಆಗಬಹುದಿತ್ತು. ಸಚಿವ ಸ್ಥಾನ ವಹಿಸಿಕೊಂಡ ಮೇಲೆ ಸಿಧು ಹೆಚ್ಚು ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂದು ಜನ ಬಯಸಿದರೆ ಸಹಜವೇ. 'ವಾರಕ್ಕೆ ಒಂದು ದಿನವಷ್ಟೇ ಟಿವಿ ಕಾಮಿಡಿ ಷೋ ಶೂಟಿಂಗಿಗೆ ಮುಂಬೈಗೆ ಹೋಗುತ್ತೇನೆ. ನಾನು ಮಾಡುವ ಏಕೈಕ ಉದ್ಯೋಗವದು' ಎಂದಿದ್ದಾರೆ ಸಿಧು. ಜನ ಸಿಟ್ಟಿಗೆದ್ದು 'ಅದೇ ಉದ್ಯೋಗ ಮಾಡಿಕೊಂಡಿರು' ಎಂದು ವಾಪಸ್ ಕಳಿಸಿದರೆ ಮಾತ್ರ ಕಷ್ಟವೇ!

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65